**ಶ್ರೀ ಪ್ರಕಾಶ್ ಕೆ. ರಾಥೋಡ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ಇವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮುಖ್ಯ ಮಂತ್ರಿಯವರ ಉತ್ತರ**

**ಸೂಚನೆ:**

ಹೈದ್ರಾಬಾದ್-ಕರ್ನಾಟಕಕ್ಕೆ ನೇಮಕಾತಿ ಮೀಸಲಾತಿ ಹಾಗೂ ಸ್ಥಳೀಯ ವೃಂದಗಳ ರಚನೆ ಹಂಚಿಕೆ ವ್ಯಕ್ತಿಗಳ ವರ್ಗಾವಣೆ 2013ರ ನಿಯಮ 6ರಲ್ಲಿ ನೌಕರರಿಂದ ಅನುಬಂಧ-ಸಿ ಯಲ್ಲಿ 45ದಿನಗಳ ಒಳಗಾಗಿ ಅರ್ಜಿ ನೀಡಲು ಅನುಮತಿಸಲಾಗಿದ್ದು, ಹಲವಾರು ನೌಕರರು ನಿಗದಿತ ಅವಧಿಯಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗದೇ ಇರುವುದರಿಂದ ಇವರಿಗೆ ಮತ್ತೊಮ್ಮೆ ಅವಕಾಶ ನೀಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ ಕಂಡಿಕೆ 3 ಮತ್ತು 13 ರಲ್ಲಿ ನಿಗಧಿಪಡಿಸಲಾಗಿರುವ ಪ್ರಮಾಣದಂತೆ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಹುದ್ದೆಗಳನ್ನು ಮೀಸಲಿರಿಸಲು ಮತ್ತು ಈ ರೀತಿ ಮೀಸಲಿರಿಸಿರುವ ಹುದ್ದೆಗಳನ್ನೊಳಗೊಂಡ ಪ್ರತ್ಯೇಕ ಸ್ಥಳೀಯ ವೃಂದವನ್ನು ರಚಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಆದೇಶದ ಕಂಡಿಕೆ 5(1)ರಲ್ಲಿ ಸ್ಥಳೀಯ ಮತ್ತು ಮಿಕ್ಕುಳಿದ ವೃಂದಗಳು ನೇಮಕಾತಿ, ಸ್ಥಳನಿಯುಕ್ತಿ, ಜೇಷ್ಠತೆ, ಮುಂಬಡ್ತಿ ಮತ್ತು ವರ್ಗಾವಣೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಘಟಕಗಳಾಗಿರುವುದಾಗಿ ತಿಳಿಸಲಾಗಿರುತ್ತದೆ. ಸ್ಥಳೀಯ ಮತ್ತು ಮಿಕ್ಕುಳಿದ ವೃಂದಗಳು ಪ್ರತ್ಯೇಕ ಘಟಕಗಳಾಗಿರುವುದರಿಂದ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಂದ ಆಯ್ಕೆಯನ್ನು ಪಡೆದು ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳ ಮಟ್ಟಿಗೆ ಅವರುಗಳನ್ನು ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಬೇಕಾಗಿರುತ್ತದೆ.

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು, 2013ರ ನಿಯಮ 7(1) ರಲ್ಲಿ ಸ್ಥಳೀಯ ಮತ್ತು ಮಿಕ್ಕುಳಿದ ವೃಂದಗಳ ಪ್ರತ್ಯೇಕ ಜೇಷ್ಠತೆಯನ್ನು ನಿರ್ವಹಿಸುವಂತೆ ತಿಳಿಸಲಾಗಿರುತ್ತದೆ.

ಮೇಲಿನ ನಿಯಮದಂತೆ ನಿಗಧಿತ ಅವಧಿಯಲ್ಲಿ ತಮ್ಮ ಆಯ್ಕೆ / ಇಚ್ಛೆಯನ್ನು ಚಲಾಯಿಸಿದ ಸ್ಥಳೀಯ ವ್ಯಕ್ತಿಗಳನ್ನು ಅವರ ರೋಸ್ಟರ್ ಸಹಿತ ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಿ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳ ಪ್ರತ್ಯೇಕ ಜೇಷ್ಠತಾ ಪಟ್ಟಿಯನ್ನು ತಯಾರಿಸಿ, ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 33 ಹೈಕಲು ೨೦೧೪, ದಿನಾಂಕ 10.04.2014ರನ್ವಯ ರೋಸ್ಟರ್ ಸರಿದೂಗಿಸಿ ನೇರ ನೇಮಕಾತಿ ಅಥವಾ ಮುಂಬಡ್ತಿ ಮೂಲಕ ಭರ್ತಿಮಾಡಿಕೊಳ್ಳಲಾಗುತ್ತದೆ.

ಮೇಲಿನ ಆದೇಶ ಹಾಗೂ ನಿಯಮಗಳನುಸಾರ ಈಗಾಗಲೇ ಎಲ್ಲಾ ಇಲಾಖೆಗಳಲ್ಲಿ ಹಾಗೂ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳೆಂದು ಜೇಷ್ಠತಾ ಪಟ್ಟಿಗಳನ್ನು ಅಂತಿಮಗೊಳಿಸಿ ಅಧಿಸೂಚಿಸಲು ಕ್ರಮವಹಿಸಲಾಗಿರುತ್ತದೆ. ಅಂತೆಯೇ ಸದರಿ ಅಂತಿಮಗೊಳಿಸಿದ ಜೇಷ್ಠತಾ ಪಟ್ಟಿಗಳನುಸಾರ ಮುಂಬಡ್ತಿಗಳನ್ನು ಅರ್ಹ ಅಭ್ಯರ್ಥಿಗಳಿಗೆ ಆಯಾ ವೃಂದಗಳಲ್ಲಿ ಈಗಾಗಲೇ ನೀಡಲಾಗಿರುತ್ತದೆ.

ಕರ್ನಾಟಕ ಸಾರ್ವಜನಿಕ ಉದ್ಯೋಗದ ಮೂಲ ಆದೇಶದಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದ ವ್ಯಕ್ತಿಗಳು ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಳ್ಳಲು 30 ದಿನಗಳ ಕಾಲಾವಕಾಶವನ್ನು ಮಾತ್ರ ಕಲ್ಪಿಸಲಾಗಿತ್ತು. ನಂತರದಲ್ಲಿ ಅಧಿಕಾರಿ / ನೌಕರರ ಹಿತದೃಷ್ಟಿಯಿಂದ ಈ ಕಾಲಾವಧಿಯನ್ನು 45 ದಿನಗಳಿಗೆ ಹೆಚ್ಚಿಸಲಾಗಿರುತ್ತದೆ.

ಮಾನ್ಯ ಶಾಸಕರ ಕೋರಿಕೆಯಂತೆ ನಿಗಧಿತ ಕಾಲಾವಧಿಯಲ್ಲಿ ಆಯ್ಕೆ ಸಲ್ಲಿಸದೇ ಇರುವವರಿಗೆ ಮತ್ತೊಮ್ಮೆ ಅವಕಾಶ ನೀಡಿದಲ್ಲಿ ಈಗಾಗಲೇ ವಿವಿಧ ಇಲಾಖೆಗಳಲ್ಲಿ ಅಧಿಕಾರಿ / ನೌಕರರುಗಳನ್ನು ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಿ ಪ್ರಕಟಿಸಲಾಗಿರುವ ಜೇಷ್ಠತಾ ಪಟ್ಟಿಗಳನ್ನು ಪರಿಷ್ಕರಿಸಬೇಕಾಗುತ್ತದೆ. ಇಂತಹ ಪರಿಷ್ಕರಣೆಗಳಿಂದ ಈಗಾಗಲೇ ನಿಯಮಾನುಸಾರ ನಿಗಧಿತ ಅವಧಿಯಲ್ಲಿ ಸ್ಥಳೀಯ ವೃಂದದೊಳಗೆ ಸ್ವಇಚ್ಛೆಯಿಂದ ಗುರುತಿಸಿಕೊಂಡಿರುವ ಕಲ್ಯಾಣ ಕರ್ನಾಟಕದ ಸ್ಥಳೀಯ ಅಭ್ಯರ್ಥಿಗಳ ಜೇಷ್ಠತೆ ಬದಲಾಗಲಿದ್ದು ಇದರಿಂದ ಈಗಾಗಲೇ ನೀಡಿರುವ ಮುಂಬಡ್ತಿಗಳನ್ನು ಸಹ ಪರಿಷ್ಕರಿಸಬೇಕಾಗುತ್ತದೆ. ಈ ಕ್ರಮದಿಂದ ಭಾದಿತರಾದ ಯಾವುದೇ ಅಧಿಕಾರಿ / ನೌಕರರು ನ್ಯಾಯಾಲಯದ ಮೊರೆ ಹೋಗುವ ಸಂಭವನೀಯತೆ ಹೆಚ್ಚು ಇರುತ್ತದೆ. ಇದರಿಂದ ನ್ಯಾಯಾಲಯ ಪ್ರಕರಣಗಳು ಮತ್ತುಷ್ಟು ಹೆಚ್ಚಾಗಿ ವೃಂದ ನಿರ್ವಹಣೆ ಸಂಪೂರ್ಣ ಗೊಂದಲಮಯವಾಗುವ ಹಿನ್ನೆಲೆಯಲ್ಲಿ ನಿಗಧಿತ ಅವಧಿಯಲ್ಲಿ ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಳ್ಳಲು ಇಚ್ಛೆ / ಆಯ್ಕೆಯನ್ನು ಸಲ್ಲಿಸದೇ ಇರುವವರಿಗೆ ಮತ್ತೊಮ್ಮೆ ಅವಕಾಶವನ್ನು ನೀಡುವುದು ಸೂಕ್ತವಾಗಿರುವುದಿಲ್ಲ.

ಸಂಖ್ಯೆ: ಸಿಆಸುಇ 25 ಹೈಕಕೋ 2021

(ಬಿ. ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿಗಳು